ಇಂಡಸ್ ಇಂಡ್ ಬ್ಯಾಂಕ್ – ನಿಮ್ಮ ಹಣಕಾಸಿನ ಪಾಲುದಾರ.
ಇಂಡಸ್ ಇಂಡ್ ಬ್ಯಾಂಕ್ ಅತ್ಯುತ್ತಮತೆಯನ್ನು ನೀಡುವ ಮೂಲಕ, ದೀರ್ಘಾವಧಿ ಸಂಬಂಧ ನಿರ್ಮಿಸುವ ಮೂಲಕ, ಹೊಸತನದ ಪರಿಹಾರ ನೀಡುವ ಮೂಲಕ ಮತ್ತು ವಿಶಿಷ್ಟ ಒಳನೋಟಗಳನ್ನು ಪೋಷಿಸುವ ಮೂಲಕ ಲಕ್ಷಾಂತರ ಬೇಡಿಕೆಯ ಗ್ರಾಹಕರನ್ನು ಯಶಸ್ವಿಯಾಗಿ ಸಬಲೀಕರಣಗೊಳಿಸಿದೆ.

**ಹೆಚ್ಚಿನ ಮಾಹಿತಿಗಾಗಿ:**

- ದಯವಿಟ್ಟು ನಮ್ಮ ಬ್ಯಾಂಕ್ ಶಾಖೆಗಳಿಗೆ ಭೇಟಿ ನೀಡಿ
- ನಮ್ಮ 24 ಗಂಟೆಗಳ ಫೋನ್ ಬ್ಯಾಂಕಿಂಗ್‌ಗೆ ಕರೆಮಾಡಿ: 1860 267 7777
- www.indusind.com ಗೆ ಲಾಗಿನ್ ಮಾಡಿ
- ಇಮೇಲ್ ಮಾಡಿ: premium.care@indusind.com

ಮೇಲೆ ನೀಡಲಾದ ದಾಖಲೀಕರಣ ಇಂಡಸ್ ಇಂಡ್ ಬ್ಯಾಂಕ್‌ನ ಏಕಮಾತ್ರ ತೀರ್ಮಾನಕ್ಕೆ ಒಳಪಟ್ಟಿದೆ.

ನಿಯಮ ಮತ್ತು ಷರತ್ತುಗಳು ಅನ್ವಯ.

Back

IndusInd Bank

# ಇಂಡಸ್ ಇಂಡ್ ಬ್ಯಾಂಕ್ ಕ್ರೆಡಿಟ್ ಕಾರ್ಡ್
# ಅತ್ಯಂತ ಮುಖ್ಯವಾದ ನಿಯಮ ಮತ್ತು ಷರತ್ತುಗಳು



Cover

## ಇಂಡಸ್ ಇಂಡ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗಳ ಅತ್ಯಂತ ಮುಖ್ಯವಾದ ನಿಯಮ ಮತ್ತು ಷರತ್ತುಗಳು

ಅತ್ಯಂತ ಪ್ರಮುಖವಾದ ನಿಯಮಗಳು ಮತ್ತು ಷರತ್ತುಗಳು (ಎಂಐಟಿಸಿ) ಹಾಗೂ ಇಲ್ಲಿ ನೀಡಲಾದ ಎಲ್ಲಾ ಮಾಹಿತಿ ಎಲ್ಲಾ ಕ್ರೆಡಿಟ್ ಕಾರ್ಡ್‌ಗಳು / ಕಾರ್ಡ್‌ಹೋಲ್ಡರ್‌ಗಳು / ಕ್ರೆಡಿಟ್ ಕಾರ್ಡ್‌ಗಳ ಅರ್ಜಿದಾರರು / ಬ್ಯಾಂಕಿನ ಗ್ರಾಹಕರು / ಸಾರ್ವಜನಿಕರ ಸದಸ್ಯರು ಬ್ಯಾಂಕಿನ ಕ್ರೆಡಿಟ್ ಕಾರ್ಡ್ ಉತ್ಪನ್ನದ ಬಗ್ಗೆ ಆಸಕ್ತಿಯನ್ನು ತೋರಿಸುತ್ತದೆ. ಈ ಮೂಲಕ, ಎಂಐಟಿಸಿ ಬದಲಾವಣೆಗೆ ಒಳಪಟ್ಟಿರುತ್ತದೆ. ಈ ಎಂಐಟಿಸಿ ಬ್ಯಾಂಕಿನ ಕಾರ್ಡ್‌ಹೋಲ್ಡರ್ ಒಪ್ಪಂದದ ನಿಯಮಗಳು ಮತ್ತು ಷರತ್ತುಗಳ ಜೊತೆಗೆ ಓದಬೇಕು.

## ದಂಡ ಮತ್ತು ಶುಲ್ಕಗಳು

ನಿಗದಿತ ಶುಲ್ಕಗಳು

| ಶುಲ್ಕ* | ಸೇರ್ಪಡೆ ಶುಲ್ಕ | ವಾರ್ಷಿಕ ಶುಲ್ಕ | ಆಡ್–ಆನ್ ಕಾರ್ಡ್ ಶುಲ್ಕ |
|---|---|---|---|
| ಪ್ಲಾಟಿನಂ ಔರಾ | ₹500 | ಏನೂ ಇಲ್ಲ | ಏನೂ ಇಲ್ಲ |
| ಪ್ಲಾಟಿನಂ ಔರಾ ಎಡ್ಜ್ | ₹500 | ಏನೂ ಇಲ್ಲ | ಏನೂ ಇಲ್ಲ |
| ಪ್ಲಾಟಿನಂ ಸೆಲೆಕ್ಟ್ | ₹999 | ಏನೂ ಇಲ್ಲ | ಏನೂ ಇಲ್ಲ |
| ಪ್ಲಾಟಿನಂ | ₹3000 | ಏನೂ ಇಲ್ಲ | ಏನೂ ಇಲ್ಲ |
| ಐಕಾನಿಯಾ | ₹3500 | ಏನೂ ಇಲ್ಲ | ಏನೂ ಇಲ್ಲ |
| ಡುಯೋ | ₹249 | ಏನೂ ಇಲ್ಲ | ಏನೂ ಇಲ್ಲ |
| ಪೇಬ್ಯಾಕ್ | ₹249 | ಏನೂ ಇಲ್ಲ | ಏನೂ ಇಲ್ಲ |
| ನೆಕ್ಸ್ಟ | ₹3499 | ಏನೂ ಇಲ್ಲ | ಏನೂ ಇಲ್ಲ |
| ಲೆಜೆಂಡ್ | ₹9999 | ಏನೂ ಇಲ್ಲ | ಏನೂ ಇಲ್ಲ |
| ಪಿನಾಕಲ್ | ₹12999 | ಏನೂ ಇಲ್ಲ | ಏನೂ ಇಲ್ಲ |
| ಇಂಟರ್‌ಮೈಲ್ಸ್ ಇಂಡಸ್ ಇಂಡಸ್ ಇಂಡ್ ಬ್ಯಾಂಕ್ ಒಡಿಸ್ಸೀ ಕ್ರೆಡಿಟ್ ಕಾರ್ಡ್ | ₹10000 | ₹4000 | ಏನೂ ಇಲ್ಲ |
| ಇಂಟರ್‌ಮೈಲ್ಸ್ ಇಂಡಸ್ ಇಂಡಸ್ ಇಂಡ್ ಬ್ಯಾಂಕ್ ವೋಯೇಜ್ ಕ್ರೆಡಿಟ್ ಕಾರ್ಡ್ | ₹2000 | ₹2000 | ಏನೂ ಇಲ್ಲ |



## ಇತರ ಹಣಕಾಸಿನ ಶುಲ್ಕಗಳು

| ಬಡ್ಡಿ ಶುಲ್ಕಗಳು | ಮಾಸಿಕ ದರ | ವಾರ್ಷಿಕ ದರ |
|---|---|---|
| ಎಲ್ಲಾ ಕಾರ್ಡ್ ಗಳಿಗೆ | 3.83% | 46% |
| ಬಡ್ಡಿ ಮುಕ್ತ ಅವದಿ: | 50 ದಿನಗಳವರೆಗೆ ಒಟ್ಟು ಬಾಕಿ ಮೊತ್ತ ಪೂರ್ಣವಾಗಿ ಪಾವತಿಸದಿದ್ದರೆ ಬಡ್ಡಿಮುಕ್ತ ಅವಧಿ ಅನ್ವಯವಾಗುವುದಿಲ್ಲ | |
| ತಡಪಾವತಿ ಶುಲ್ಕಗಳು | ಅದಿಕ ಬಾಕಿ<br>(ಸೆಪ್ಟೆಂಬರ್ 30, 2020 ರವರೆಗೆ)<br>₹100 ವರೆಗೆ – ಏನೂ ಇಲ್ಲ<br>₹101 ₹500 – ₹100<br>₹501 ₹1000 – ₹350<br>₹1001 ₹10000 – ₹550<br>₹10000 ಮೇಲ್ಪಟ್ಟು – ₹700 | ಅದಿಕ ಬಾಕಿ<br>(ಡಬ್ಲ್ಯು.ಇ.ಎಫ್. ಅಕ್ಟೋಬರ್ 1, 2020 ವರೆಗೆ)<br>₹100 ವರೆಗೆ – ಏನೂ ಇಲ್ಲ<br>₹101 ₹500 ನಡುವೆ – ₹100<br>₹501 ₹1,000 ನಡುವೆ – ₹350<br>₹1001 ₹10,000 ನಡುವೆ – ₹550<br>₹10,001 ₹25,000 ನಡುವೆ – ₹800<br>₹25,001 ₹50,000 ನಡುವೆ – ₹1100<br>₹50,000 ಮೇಲ್ಪಟ್ಟು – ₹1300 |
| ಅಧಿಕ ಮಿತಿ ಶುಲ್ಕಗಳು | ₹500 ಕ್ಕೆ ಒಳಪಟ್ಟಂತೆ 2.5% ಅಧಿಕ ಮಿತಿ ಮೊತ್ತ | |
| ಚೆಕ್ ಮರಳಿಸುವಿಕೆ | ₹250 | |
| ಹೊರ ಊರಿನ ಚೆಕ್ ಸಂಸ್ಕರಣಾ ಶುಲ್ಕ | ಕೇವಲ ಇಂಡಸ್ ಇಂಡ್ ಬ್ಯಾಂಕ್ ಸ್ಥಳಗಳಿಂದ ಮಾತ್ರ ಹೊರ ಊರಿನ ಚೆಕ್ ಗಳನ್ನು ಸ್ವೀಕರಿಸಲಾಗುತ್ತದೆಂದು ದಯವಿಟ್ಟು ಗಮನಿಸಿ | |
| ಮುಂಗಡ ನಗದು ಶುಲ್ಕಗಳು | ಕನಿಷ್ಟ ₹00 ಕ್ಕೆ ಒಳಪಟ್ಟಂತೆ 2.5% ಮುಂಗಡ ಮೊತ್ತ (ಪಯೋನೀರ್ ಹೆರಿಟೇಜ್, ಪಯೋನೀರ್ ಲೆಗಸಿ ಮತ್ತು ಲೆಜೆಂಡ್ ಕ್ರೆಡಿಟ್ ಕಾರ್ಡ್ ಹೊರತುಪಡಿಸಿ) | |
| ಇಂಡಸ್ ಇಂಡ್ ಬ್ಯಾಂಕ್ ಹೊರತಾದ ಎಟಿಎಂಗಳ ಮೇಲೆ ಬಾಕಿ ಪರಿಶೀಲನಾ ಶುಲ್ಕಗಳು | ₹25 | |
| ಎಟಿಎಂಗಳಲ್ಲಿ ವಿದೇಶೀ ಶುಲ್ಕ | ಗ್ರಾಹಕರಿಗೆ ಅನ್ವಯವಾಗುವ ದರಗಳಲ್ಲಿ ನೀಡಲಾಗುತ್ತದೆ | |
| ವಿದೇಶೀ ನಗದು ಮಾರ್ಕ್–ಅಪ್ | ಎಲ್ಲಾ ಕ್ರೆಡಿಟ್ ಕಾರ್ಡ್‌ಗಳ ಮೇಲೆ *<br>*ಇಂಡಸ್ ಇಂಡ್ ಬ್ಯಾಂಕ್ ಲೆಜೆಂಡ್ ಕ್ರೆಡಿಟ್ ಕಾರ್ಡ್–1.8% (ಪ್ರಸ್ತುತ ದರದಲ್ಲಿ, ಭಾರತ ಸರ್ಕಾರದ, ಹಣಕಾಸು ಸಚಿವಾಲಯ ಸೂಚಿಸಿದಂತೆ ಜಿ ಎಸ್ ಟಿ ಅನ್ವಯವಾಗುತ್ತದೆ) | |

ಅಮೇರಿಕನ್ ಎಕ್ಸ್‌ಪ್ರೆಸ್‌ನಿಂದ ಮಾರ್ಪಡಿಸಲಾಗುವ ವಿದೇಶೀ ವಿನಿಮಯಕ್ಕೆ, ಅಮೇರಿಕನ್ ಎಕ್ಸ್‌ಪ್ರೆಸ್ ಮಾರ್ಪಡಿಸಲಾದ ಮೊತ್ತದ 3.5% ಅನ್ನು ಅನುಕೂಲಕರ ಶುಲ್ಕವಾಗಿ ಅನ್ವಯಿಸುತ್ತದೆ, ಇದರಲ್ಲಿ 1.5% ಅಮೇರಿಕನ್ ಎಕ್ಸ್‌ಪ್ರೆಸ್ ಹಿಡಿದುಕೊಳ್ಳುತ್ತದೆ ಅಥವಾ ನಾವು ನಿರ್ಧರಿಸಿದ ಇತರ ದರಗಳನ್ನು ಹೊಂದಿದ್ದು, ನಿಮಗೆ ಈ ಬಗ್ಗೆ ಸೂಚಿಸಲಾಗುತ್ತದೆ. ಯುಎಸ್ ಡಾರ್ಲ ಹೊರತುಪಡಿಸಿದ ಇತರ ಶುಲ್ಕವನ್ನು ಅಮೇರಿಕನ್ ಎಕ್ಸ್‌ಪ್ರೆಸ್ ಮಾರ್ಪಡಿಸಿದರೆ, ನಿಮ್ಮ ಬಿಲ್ಲಿಂಗ್ ನಗದಿಗೆ ಮಾರ್ಪಡಿಸುವ ಮೊದಲು ಅದನ್ನು ಯುಎಸ್ ಡಾಲರ್ ಆಗಿ ಪರಿವರ್ತಿಸಲಾಗುತ್ತದೆ.

| | |
|---|---|
| ರೈಲ್ವೇ ಬುಕ್ಕಿಂಗ್ ಹೆಚ್ಚುವರಿ ಶುಲ್ಕ | ಅನ್ವಯವಾಗುವಂತೆ |
| ಉಳಿತಾಯ ಯೋಜನೆ ಬದಲಾವಣೆ (ಇಂಡಸ್ ಇಂಡ್ ಬ್ಯಾಂಕ್ ಪ್ಲಾಟಿನಂ ಅರೇನಾ, ಪ್ಲಾಟಿನಂ ಔರಾ ಎಡ್ಜ್ ಕ್ರೆಡಿಟ್ ಕಾರ್ಡ್ ಮತ್ತು ಇಂಡಸ್ ಇಂಡ್ ಬ್ಯಾಂಕ್ ಗೋಲ್ಡ್ ಕ್ರೆಡಿಟ್ ಕಾರ್ಡ್) | ₹250 |
| ಇಂಧನ ಹೆಚ್ಚುವರಿ ಶುಲ್ಕ | 1% (₹400 – ₹4000 ನಡುವಿನ ವಹಿವಾಟುಗಳಿಗೆ ವಿನಾಯಿತಿ; ಇದು ಕ್ಲಾಸಿಕ್, ಗೋಲ್ಡ್ ಬಿಸಿನೆಸ್ ಗೋಲ್ಡ್ ಗಳಿಗೆ ಅನ್ವಯವಾಗುವುದಿಲ್ಲ. ( ನಿಗದಿತ ದರಕ್ಕೆ ಅನುಗುಣವಾಗಿ ಇಂಧನ ಹೆಚ್ಚುವರಿ ಶುಲ್ಕದ ಮೇಲೆ ಜಿ ಎಸ್ ಟಿ ಅನ್ವಯವಾಗುತ್ತದೆ ಹಾಗೂ ಇದನ್ನು ಗ್ರಾಹಕ ಭರಿಸಬೇಕಾಗುತ್ತದೆ) |
| ಇಂಡಸ್ ಇಂಡ್ ಬ್ಯಾಂಕ್ ಶಾಖೆಯಲ್ಲಿ ನಗದು ಪಾವತಿ ಶುಲ್ಕ | ₹100 |
| ಜಿ ಎಸ್ ಟಿ | ಜಿ ಎಸ್ ಟಿ ಪ್ರಸ್ತುತ ದರದಲ್ಲಿ, ಭಾರತ ಸರ್ಕಾರದ, ಹಣಕಾಸು ಸಚಿವಾಲಯ ಸೂಚಿಸಿದಂತೆ |
| ನಕಲಿ ಸ್ಟೇಟ್ ಮೆಂಟ್ ಮನವಿ | ಪ್ರತೀ ಸ್ಟೇಟ್‌ಮೆಂಟ್‌ಗೆ ₹100 (3 ತಿಂಗಳಿನಾಚೆ) |
| ಮರು–ನೀಡಿಕೆ/ಬದಲಾವಣೆ | ₹100 |
| ಚಾರ್ಜ್–ಸ್ಲಿಪ್ ಮನವಿ | ₹300 |
| ಆದ್ಯತೆಯ ಪಾಸ್ ಲೌಂಜಸ್ | ಪ್ರತೀ ಭೇಟಿಗೆ ಪ್ರತೀ ವ್ಯಕ್ತಿಗೆ ಯುಎಸ್ |

*ಎಲ್ಲಾ ಕಾರ್ಡ್ ಗಳಿಗೆ ವಾರ್ಷಿಕ ಬಡ್ಡಿ ಶುಲ್ಕ 46% ಆಗಿದ್ದು, ಇದು ಕಾರ್ಡ್ ಸದಸ್ಯರಿಗೆ ಇಂತಹ ಸೇವೆಗಳನ್ನು ನೀಡಲು 11% ಮತ್ತು 35% ಮೂಲದರ ಒಳಗೊಂಡಿದೆ (ಇದು ರಿಸ್ಕ್ ಪ್ರೀಮಿಯಂ, ಟೆನರ್ ಪ್ರೀಮಿಯಂ, ನಿರ್ವಹಣಾ ವೆಚ್ಚ ಮತ್ತು ಮಾರ್ಜಿನ್ ಒಳಗೊಂಡಿದೆ. ಡಿಬಿಓಡಿ ಸಂ. ನಿರ್ದೇಶನ ಬಿಸಿ. 93/13.03.00/2006–07 ದಿನಾಂಕ ಮೇ 7, 2007 ರ ಪ್ಯಾರಾ 4 ರಂತೆ ಹಾಗೂ ಆರ್‌ಬಿಐ ಎಂಸಿ ಡಿಬಿಓಡಿ ಸಂ. ಎಫ್ ಎಸ್ ಡಿ ಬಿಸಿ. 14 / 24.01.011/ 2011–12 ದಿನಾಂಕ ಜೂನ್ 1, 2011 ರ ಪ್ಯಾರಾ 3 ರಲ್ಲಿರುವಂತೆ ಕ್ರೆಡಿಟ್ ಕಾರ್ಡ್ ಗಳ ಮೇಲೆ ವಿಧಿಸಲಾಗುವ ಸೀಲಿಂಗ್ ದರ 48% ಆಗಿದೆ ಎನ್ನುವುದನ್ನು ದಯವಿಟ್ಟು ಗಮನಿಸಿ.

**ಅನ್ವಯವಾಗುವ ದಂಡ/ಶುಲ್ಕಗಳನ್ನು ಗ್ರಾಹಕರಿಗೆ ಅನ್ವಯವಾಗುವ ಸಮಯದಲ್ಲಿ ಗ್ರಾಹಕರಿಗೆ ತಿಳಿಸಲಾಗುತ್ತದೆ.**

**ಗ್ರಾಹಕನ ಮೊದಲ ಮಾಸಿಕ ಬಿಲ್ ನಲ್ಲಿ ಈ ಶುಲ್ಕಗಳಿಗೆ ವಿನಾಯಿತಿ ನೀಡಲಾಗುತ್ತದೆ. ಶುಲ್ಕಗಳನ್ನು ಬ್ಯಾಂಕ್ ತನ್ನದೇ ನಿರ್ಧಾರದಲ್ಲಿ ಕಾಲಕಾಲಕ್ಕೆ ಪರಿಷ್ಕರಿಸುತ್ತದೆ. ಇಂತಹ ಯಾವುದೇ ಶುಲ್ಕಗಳಿದ್ದಲ್ಲಿ, ಪೂರ್ವ ಸೂಚನೆಯೊಂದಿಗೆ ಗ್ರಾಹಕನಿಗೆ ತಿಳಿಸಲಾಗುತ್ತದೆ.**



**ಸ್ಟೇಟ್‌ಮೆಂಟ್ ಆವರ್ತನ: ಪ್ರತೀ ತಿಂಗಳ 25 ರಂದು**

| ವಿಧ | ವಹಿವಾಟು ದಿನಾಂಕ | ಮೊತ್ತ |
|---|---|---|
| ಶಾಪರ್ಸ್ ಸ್ಟಾಪ್ | 14 ಜನವರಿ 11 | ₹10,000 |
| ಸ್ವೀಕರಿಸಲಾದ ಮೊತ್ತ | 10 ಫೆಬ್ರವರಿ 11 | ₹7,000 |

ಬಡ್ಡಿ ಲೆಕ್ಕಾಚಾರಕ್ಕೆ ಉದಾಹರಣೆ: ರೂ 10,000 ದ ಪೂರ್ಣಪಾವತಿಯನ್ನು ಪಾವತಿ ಬಾಕಿ ದಿನಾಂಕದಂದು ಮಾಡಿದರೆ, ಯಾವುದೇ ಬಡ್ಡಿ ವಿಧಿಸಲಾಗುವುದಿಲ್ಲ. ಮೇಲಿನ ಉದಾಹರಣೆಯಲ್ಲಿ ಬಡ್ಡಿಯನ್ನು 25–ಫೆಬ್ರವರಿ–11 ರ ದಿನಾಂಕದ ಸ್ಟೇಟ್ ಮೆಂಟ್ ನಲ್ಲಿ ಕೆಳಗಿನಂತೆ ವಿಧಿಸಲಾಗುತ್ತದೆ.

| ವಿಧ | ವಹಿವಾಟು ದಿನಾಂಕ | ಅಧಿಕ ಬಾಕಿ | ಇಲ್ಲಿಯವರೆಗಿನ | ದಿನಗಳ | ಬಡ್ಡಿ ದರ | ಬಡ್ಡಿ |
|---|---|---|---|---|---|---|
| ಶಾಪರ್ಸ್ ಸ್ಟಾಪ್ | 14–ಜನವರಿ–11 | ₹10000 | 25–ಜನವರಿ–11 | 11 | ತಿಂಗಳಿಗೆ 3.83%/ ವಾರ್ಷಿಕ 46% | 138.63 (11/365 ದಿನಗಳು 46%* ₹10,000) |
| ತೆರೆದ ಬ್ಯಾಲೆನ್ಸ್ 25–ಜನವರಿ–11 ರಂದು | | ₹10000 | 10–ಫೆಬ್ರವರಿ–11 | 16 | ತಿಂಗಳಿಗೆ 3.83%/ ವಾರ್ಷಿಕ 46% | 201.64 (16/365 ದಿನಗಳು 46%* ₹10,000) |
| 10–ಫೆಬ್ರವರಿ–11 ರಂದು ₹7,000 ಪಾವತಿ | 10– ফেব–11 | ₹3000 | 25–ಫೆಬ್ರವರಿ–11 | 15 | ತಿಂಗಳಿಗೆ 3.83%/ ವಾರ್ಷಿಕ 46% | 56.71 (15/365 ದಿನಗಳು 46%* ₹3,000) |
| ಪಾವತಿಸಬೇಕಾದ ಒಟ್ಟು ಬಡ್ಡಿ | | | | | | ₹396.98 |

ಮೇಲಿನ ಉದಾಹರಣೆಯಲ್ಲಿ ಬಡ್ಡಿಯನ್ನು ಮಾಸಿಕ 3.83% ನಂತೆ ಲೆಕ್ಕಹಾಕಲಾಗಿದೆ ಎನ್ನುವುದನ್ನು ದಯವಿಟ್ಟು ಗಮನಿಸಿ

ಬಡ್ಡಿಯನ್ನು ಕಾರ್ಡ್ ಹೋಲ್ಡರ್‌ನ ಪ್ರಸ್ತುತ ಹೆಚ್ಚುವರಿ ಬ್ಯಾಲೆನ್ಸ್ ನ ದೈನಂದಿನ ಆಧಾರದಲ್ಲಿ ಲೆಕ್ಕ ಹಾಕಲಾಗುತ್ತದೆ. ಒಟ್ಟು ಬಾಕಿ ಮೊತ್ತವನ್ನು ಬಾಕಿ ದಿನಾಂಕದೊಳಗೆ ಪಾವತಿಸದಿದ್ದರೆ ಬಡ್ಡಿ ವಿಧಿಸಲಾಗುತ್ತದೆ. ಬಡ್ಡಿಯನ್ನು ಎಲ್ಲಾ ಶುಲ್ಕಗಳು, ಬಡ್ಡಿ ಹಾಗೂ ಜಿ ಎಸ್ ಟಿ ಮೇಲೆ ವಿಧಿಸಲಾಗುತ್ತದೆ. ಜೊತೆಗೆ, ಬಡ್ಡಿಯನ್ನು ಪಾವತಿ ದಿನಾಂಕದವರೆಗಿನ ವಹಿವಾಟುಗಳ ದಿನಾಂಕದಿಂದ ಎಲ್ಲಾ ನಗದು ಮುಂಗಡಗಳ ಮೇಲೆ ವಿಧಿಸಲಾಗುತ್ತದೆ. ಪ್ರತೀ ತಿಂಗಳಿಗೆ ಆರಂಭದಲ್ಲಿ 3.83% ಬಡ್ಡಿದರ (ವಾರ್ಷಿಕ 46%) ಅನ್ವಯವಾಗುತ್ತದೆ. ಬ್ಯಾಂಕ್ ತನ್ನದೇ ನಿರ್ಧಾರದಲ್ಲಿ ಕ್ರೆಡಿಟ್ ಇತಿಹಾಸ, ಖರೀದಿ ಮಾದರಿ, ಪಾವತಿ ವರ್ತನೆ, ಲಾಯಲ್ಟಿ ಮತ್ತು ಗ್ರಾಹಕನ ಆದಾಯ ಮೀರದಂತೆ, ಹಾಗೂ ಈ ಅಂಶಗಳನ್ನು ಆಧರಿಸಿ ಬಡ್ಡಿದರವನ್ನು ವಿಧಿಸಬಹುದಾಗಿದೆ. ಬಡ್ಡಿ ಶುಲ್ಕಗಳು ಕ್ರಿಯಾತ್ಮಕವಾಗಿದ್ದು, ಇವು ಇಂಡಸ್ ಇಂಡ್ ಬ್ಯಾಂಕ್ ನಿಂದ ಆಗಾಗ್ಗೆ ಅವಲೋಕಿಸಲ್ಪಟ್ಟಂತೆ ಬದಲಾವಣೆಗೆ ಒಳಪಟ್ಟಿರುತ್ತದೆ.

## ಕ್ರೆಡಿಟ್ ಮತ್ತು ನಗದು ವಿತ್ ಡ್ರಾ ಮಿತಿಗಳು

- ಕ್ರೆಡಿಟ್ ಮಿತಿ: ಇದು ಕಾರ್ಡ್ ಹೋಲ್ಡರ್‌ಗೆ ನಿಯೋಜಿಸಲಾದ ಗರಿಷ್ಟ ಮಿತಿ. ಎಲ್ಲಾ ವಹಿವಾಟುಗಳು, ಶುಲ್ಕ ಮತ್ತು ದಂಡಗಳೂ ಸೇರಿದಂತೆ ನಿಮ್ಮ ಒಟ್ಟು ಹೆಚ್ಚುವರಿ ಬಾಕಿ ಈ ಮಿತಿ ಮೀರುವಂತಿಲ್ಲ.
- ನಗದು ಮಿತಿ: ಇದು ಕಾರ್ಡ್ ಹೋಲ್ಡರ್‌ಗೆ ನಿಯೋಜಿಸಲಾದ ಗರಿಷ್ಟ ಮುಂಗಡ ನಗದು. ಈ ಮಿತಿ ಕ್ರೆಡಿಟ್ ಮಿತಿಗಿಂತ ಕಡಿಮೆ ಇರುತ್ತದೆ ಮತ್ತು ಒಟ್ಟಾರೆ ಕ್ರೆಡಿಟ್ ಮಿತಿಯ ಉಪಭಾಗವಾಗಿರುತ್ತದೆ
- ಲಭ್ಯವಿರುವ ಕ್ರೆಡಿಟ್ ಮಿತಿ: ಲಭ್ಯವಿರುವ ಕ್ರೆಡಿಟ್ ಮಿತಿ ಎನ್ನುವುದು ಆ ಸಮಯದಲ್ಲಿ ಕಾರ್ಡ್ ಮೇಲೆ ನಿಯೋಜಿಸಲಾದ ಕ್ರೆಡಿಟ್ ಮಿತಿ ಮತ್ತು ಹೆಚ್ಚುವರಿ ಬಾಕಿಯ ನಡುವಿನ ವ್ಯತ್ಯಾಸವಾಗಿರುತ್ತದೆ.
- ಲಭ್ಯವಿರುವ ನಗದು ಮಿತಿ: ಲಭ್ಯವಿರುವ ನಗದು ಮಿತಿ ಎನ್ನುವುದು ಆ ಸಮಯದಲ್ಲಿ ಕಾರ್ಡ್ ಮೇಲೆ ನಿಯೋಜಿಸಲಾದ ನಗದು ಮಿತಿ ಮತ್ತು ಹೆಚ್ಚುವರಿ ಬಾಕಿಯ ನಡುವಿನ ವ್ಯತ್ಯಾಸವಾಗಿರುತ್ತದೆ.
- ಕ್ರೆಡಿಟ್ ಮತ್ತು ನಗದು ಮಿತಿ ಪ್ರತೀ ಕಾರ್ಡ್ ಹೋಲ್ಡರ್‌ಗೆ ಭಿನ್ನವಾಗಿದ್ದು, ಇದು ಕಾರ್ಡ್ ಹೋಲ್ಡರ್‌ಗೆ ಕಳುಹಿಸಲಾಗುವ ಮಾಸಿಕ ಸ್ಟೇಟ್‌ಮೆಂಟ್‌ನಲ್ಲಿ ಬಹಿರಂಗವಾಗುತ್ತದೆ.

## ಬಿಲ್ಲಿಂಗ್ ಮತ್ತು ಸ್ಟೇಟ್‌ಮೆಂಟ್

- ಬ್ಯಾಂಕ್ ಕಾರ್ಡ್ ಹೋಲ್ಡರ್‌ಗೆ ಮಾಸಿಕ ಸ್ಟೇಟ್ ಮೆಂಟ್ ಅನ್ನು ಇಮೇಲ್ ಮತ್ತು/ಅಥವಾ ಭೌತಿಕ ರೂಪದಲ್ಲಿ ಕಳುಹಿಸುತ್ತದೆ, ಇದನ್ನು ಕಾರ್ಡ್ ಖಾತೆಯ ಮೇಲೆ ಯಾವುದೇ ವಹಿವಾಟು/ಪಾವತಿ ಅಥವಾ ಯಾವುದೇ ಹೆಚ್ಚುವರಿ ಮೊತ್ತವಿದ್ದಲ್ಲಿ, ಪ್ರತೀ ಬಿಲ್ಲಿಂಗ್ ಅವಧಿಗೆ ಬ್ಯಾಂಕ್ ಸೂಚಿಸಲ್ಪಟ್ಟ ಡೆಲಿವರಿ ವಿಧಾನದಲ್ಲಿ ಕಳುಹಿಸಲಾಗುತ್ತದೆ,
- ಸ್ಟೇಟ್ ಮೆಂಟ್ ಗೆ ರಸೀದಿ ಇಲ್ಲದಿದ್ದರೆ ಅದು ಈ ಒಪ್ಪಂದದ ಅಡಿಯಲ್ಲಿ ಬದ್ಧತೆ ಮತ್ತು ಹೊಣೆಗಾರಿಕೆಗಳ ಮೇಲೆ ಪರಿಣಾಮ ಬೀರುವುದಿಲ್ಲ ಹಾಗೂ ಆತ/ಆಕೆ ಪಾವತಿ ಬಾಕಿ ದಿನಾಂಕಕ್ಕೆ ಮೊದಲು ಕನಿಷ್ಟ ಬಾಕಿ ಮೊತ್ತ ಪಾವತಿಸಬೇಕು.
- ಇಂಡಸ್ ಇಂಡ್ ಬ್ಯಾಂಕ್ ನಿಂದ ನಿರ್ಧರಿಸಲ್ಪಟ್ಟಂತೆ ಒಟ್ಟು ಬಾಕಿ ಮೊತ್ತ ಅಥವಾ ಇಂತಹ ಇತರ ಮೊತ್ತದ 5% ನಂತೆ ಕನಿಷ್ಟ ಬಾಕಿ ಮೊತ್ತ ಲೆಕ್ಕ ಹಾಕಲಾಗುತ್ತದೆ. ಪ್ರತೀ ತಿಂಗಳು ಕನಿಷ್ಟ ಪಾವತಿ ಮಾಡಿದಲ್ಲಿ ಅದು ವಹಿವಾಟು ದಿನಾಂಕದಿಂದಲೇ ಎಲ್ಲಾ ಪೂರಕ ವಹಿವಾಟುಗಳ ಮೇಲೆ ಬಡ್ಡಿ ವಿಧಿಸುವಿಕೆಗೆ ಕಾರಣವಾಗುತ್ತದೆ ಮತ್ತು ನಿಮ್ಮ ಹೆಚ್ಚುವರಿ ಬ್ಯಾಲೆನ್ಸ್ ಮೇಲೆ ಪೂರಕ ಬಡ್ಡಿ ಪಾವತಿಯೊಂದಿಗೆ ಮರುಪಾವತಿ ಸಮಯ ಹಿಗ್ಗುತ್ತದೆ, ಉದಾ: ₹10,000 ವಹಿವಾಟಿನ ಮೇಲೆ, ಕನಿಷ್ಟ ಬಾಕಿ ಮೊತ್ತವನ್ನು (ಕನಿಷ್ಟ ₹100 ಕ್ಕೆ ಒಳಪಟ್ಟಿದೆ) ಪಾವತಿಸಿದರೆ, ಇಡೀ ಹೆಚ್ಚುವರಿ ಬಾಕಿಯನ್ನು ಪೂರ್ಣವಾಗಿ ಪಾವತಿಸಲು 272 ತಿಂಗಳುಗಳು ಬೇಕಾಗುತ್ತದೆ. ಜೊತೆಗೆ ಪೂರ್ಣ ಕನಿಷ್ಟ ಬಾಕಿ ಮೊತ್ತಕ್ಕೆ ಯಾವುದೇ ಹೆಚ್ಚುವರಿ ಕ್ರೆಡಿಟ್ ಮಿತಿ ಹಾಗೂ ಇಎಂಐ ಅನ್ವಯವಾಗುತ್ತದೆಂದು ದಯವಿಟ್ಟು ಗಮನಿಸಿ.



- ಕಾರ್ಡ್ ಹೋಲ್ಡರ್ ಬಿಲ್ಲಿಂಗ್ ದಿನಾಂಕದ ವಿವರಣೆಯ 15 ದಿನಗಳೊಳಗೆ ಮಾಸಿಕ ಸ್ಟೇಟ್‌ಮೆಂಟ್‌ನಲ್ಲಿ ರಸೀದಿ ಇಲ್ಲದಿದ್ದರೆ ಅಥವಾ ವ್ಯತ್ಯಾಸವಿದ್ದರೆ ಬ್ಯಾಂಕ್‌ಗೆ ತಿಳಿಸುವುದು ಆತನ ಜವಾಬ್ದಾರಿಯಾಗಿದೆ. ಕಾರ್ಡ್ ಹೋಲ್ಡರ್ ಇಂತಹ ಯಾವುದೇ ಸಂದರ್ಭದಲ್ಲಿ ಬ್ಯಾಂಕ್ ಗೆ ತಿಳಿಸದಿದ್ದರೆ, ಸ್ಟೇಟ್ ಮೆಂಟ್ ಅನ್ನು ವಿತರಿಸಿ, ಮುಕ್ತಾಯಗೊಳಿಸಲಾಗುತ್ತದೆ.

## ಹೇಗೆ ಪಾವತಿಸಬೇಕು

ಎಲ್ಲ್ ಪಾವತಿಗಳನ್ನೂ ಭಾರತೀಯ ರೂಪಾಯಿಯಲ್ಲೇ ಮಾಡಲಾಗುತ್ತದೆ. ಕಾರ್ಡ್ ಹೋಲ್ಡರ್ ಬ್ಯಾಂಕ್ ಗೆ ಕೆಳಗಿನ ವಿಧಾನದಲ್ಲಿ ಮಾತ್ರ ಪಾವತಿಸುವ ಸೌಲಭ್ಯ ಹೊಂದಿದ್ದಾನೆ.

1. ಯಾವುದೇ ಬ್ಯಾಂಕ್ ಖಾತೆಯಿಂದ ಪಾವತಿಸಲು www.indusind.com ನಲ್ಲಿ ಸ್ವಿಫ್ಟ್ ಪೇ ಆಯ್ಕೆ ಬಳಸುವುದು
2. ಎನ್ ಇ ಎಫ್ ಟಿ/ಆರ್‌ಟಿಜಿಎಸ್/ವೀಸಾ ಮನಿ ಟ್ರಾನ್ಸ್‌ಫರ್ ಸೌಲಭ್ಯ ಬಳಸಿ ಇಂಡಸ್ ಇಂಡ್ ಹೊರತಾದ ಬ್ಯಾಂಕ್ ಖಾತೆಯಿಂದ ಆನ್‌ಲೈನ್ ಫಂಡ್ ವರ್ಗಾವಣೆ ಇಂಡಸ್ ಇಂಡ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ನಂ XXXXXXXXXXXXXXXX ಪರವಾಗಿ ಚೆಕ್/ಡಿಮ್ಯಾಂಡ್ ಡ್ರಾಫ್ಟ್ ಅನ್ನು
3. ಇಂಡಸ್ ಇಂಡ್ ಬ್ಯಾಂಕ್ ಶಾಖೆಗಳು/ಎಟಿಎಂಗಳಲ್ಲಿ ಠೇವಣಿ ಮಾಡುವುದು. ನೀವು ನಿಮ್ಮ ಕಾರ್ಡ್ ಖಾತೆಗೆ ಸೂಕ್ತ ಸಮಯದಲ್ಲಿ ಪಾವತಿಸಲು ಮತ್ತು ದಂಡ ಶುಲ್ಕದಿಂದ ವಿನಾಯಿತಿ ಪಡೆಯಲು ಕನಿಷ್ಟ 4 ಕೆಲಸದ ದಿನಗಳ ಮೊದಲೇ ಚೆಕ್ ಗಳನ್ನು ಹಾಕುವಂತೆ ಸಲಹೆ ನೀಡಲಾಗುತ್ತದೆ. ಚೆಕ್ ನ ಹಿಂಭಾಗದಲ್ಲಿ ನಿಮ್ಮ ಮೊಬೈಲ್ ಸಂಖ್ಯೆಯನ್ನು ದಯವಿಟ್ಟು ನಮೂದಿಸಿ, ನಿಮ್ಮ ಚೆಕ್‌ನ ರಸೀದಿಯ ಬಗ್ಗೆ ನಿಮಗೆ ಎಸ್ ಎಂ ಎಸ್ ಕಳುಹಿಸುತ್ತೇವೆ.
4. ಇಂಡಸ್ ಇಂಡ್ ಬ್ಯಾಂಕ್ ಶಾಖೆಗಳಲ್ಲಿ ನಗದು ಠೇವಣಿ
5. ನಿಮ್ಮ ಇಂಡಸ್ ಇಂಡ್ ಹೊರತಾದ ಬ್ಯಾಂಕ್ ಖಾತೆಯಲ್ಲಿ ಇಂಡಸ್ ಇಂಡ್ ಬ್ಯಾಂಕ್ ಖಾತೆ ಅಥವಾ ಎನ್ ಎ ಸಿ ಹೆಚ್ ಸೌಲಭ್ಯದಲ್ಲಿ ಸ್ವಯಂಚಾಲಿತ ಪಾವತಿ ಸೌಲಭ್ಯ ಸಕ್ರಿಯಗೊಳಿಸಿ. ಹೆಚ್ಚಿನ ವಿವರಗಳಿಗೆ ಫೋನ್ ಬ್ಯಾಂಕಿಂಗ್ ಸಂಪರ್ಕಿಸಿ. ಹೆಚ್ಚುವರಿ ಕಾರ್ಡ್ ವಿರುದ್ಧ ಸ್ವೀಕರಿಸಲಾಗುವ ಪಾವತಿಯನ್ನು ಎಲ್ಲಾ ಇಎಂಐ ಗಳು, ತೆರಿಗೆಗಳು, ಶುಲ್ಕಗಳು, ಇತರ ಶುಲ್ಕಗಳು, ಬಡ್ಡಿದರಗಳು, ಮುಂಗಡ ನಗದು ಮತ್ತು ಖರೀದಿಗೆ ಕ್ರಮವಾಗಿ ಹೊಂದಿಸಲಾಗುತ್ತದೆ.

## ಸಂಪರ್ಕ ವಾಹಕಗಳು

- ಕಾರ್ಡ್ ದಾರ ಯಾವುದೇ ಸಂದೇಹಗಳು ಮತ್ತು/ಅಥವಾ ದೂರು ಪರಿಹಾರಗಳಿದ್ದಲ್ಲಿ ಕೆಳಗಿನ ಸಂವಹನ ಮಾಧ್ಯಮಗಳನ್ನು ಬಳಸಿ ಬ್ಯಾಂಕ್ ಅನ್ನು ಸಂಪರ್ಕಿಸಬಹುದು.

1. 24–ಗಂಟೆಗಳ ಫೋನ್ ಬ್ಯಾಂಕಿಂಗ್ ಸಂಖ್ಯೆ: 18602677777
2. ಇಮೇಲ್: premium.care@indusind.com

3. ಬ್ಯಾಂಕ್ ನ ಕ್ರೆಡಿಟ್ ಕಾರ್ಡ್ ಘಟಕಕ್ಕೆ ಬರೆಯುವ ಮೂಲಕ: ಇಂಡಸ್ ಇಂಡ್ ಬ್ಯಾಂಕ್ ಲಿ (ಕ್ರೆಡಿಟ್ ಕಾರ್ಡ್ ವಿಭಾಗ), ಅಂಚೆಪೆಟ್ಟಿಗೆ ಸಂಖ್ಯೆ 9421, ಚಕಾಲಾ, ಎಂಐಡಿಸಿ, ಅಂಧೇರಿ (ಪೂರ್ವ), ಮುಂಬೈ– 400093

4. ಬಗೆಹರಿಯಲಾಗದ ದೂರುಗಳಿದ್ದಲ್ಲಿ, ದಯವಿಟ್ಟು ಇಲ್ಲಿಗೆ ಬರೆಯಿರಿ: ಮುಖ್ಯಸ್ಥರು, ಕಾರ್ಡ್ ಸೇವೆಗಳು, ಇಂಡಸ್ ಇಂಡ್ ಬ್ಯಾಂಕ್ ಲಿ (ಕ್ರೆಡಿಟ್ ಕಾರ್ಡ್ಸ್ ವಿಭಾಗ), ಅಂಚೆಪೆಟ್ಟಿಗೆ ಸಂಖ್ಯೆ 9421, ಚಕಾಲಾ, ಎಂಐಡಿಸಿ, ಅಂಧೇರಿ (ಪೂರ್ವ), ಮುಂಬೈ– 400093 ಅಥವಾ ಇಮೇಲ್ ಮಾಡಿ: head.cardservicesindusind.com

   ನೀವು 7 ಕೆಲಸದ ದಿನಗಳೊಳಗೆ ಕೇಂದ್ರ ಕಾರ್ಡ್ ಸೇವೆಗಳಿಂದ ಪ್ರತಿಕ್ರಿಯೆ ಪಡೆಯದಿದ್ದರೆ, ನೀವು ಈ ವಿಳಾಸಕ್ಕೆ ಬರೆಯಬಹುದು: ಇಂಡಸ್ ಇಂಡ್ ಬ್ಯಾಂಕ್ ಲಿ, 701, ಸಾಲಿಟೇರ್ ಕಾರ್ಪೊರೇಟ್ ಪಾರ್ಕ್, 167, ಗುರು ಹರ್ಗೋವಿಂದ್ ಜೀ ಮಾರ್ಗ, ಅಂಧೇರಿ–ಘಾಟ್ಕೋಪರ್ ಲಿಂಕ್ ರೋಡ್, ಚಕಾಲಾ, ಅಂಧೇರಿ (ಪೂ), ಮುಂಬೈ 400093

ಇ–ಮೇಲ್: nodal.officerindusind.com

ದಯವಿಟ್ಟು ನಿಮ್ಮೆಲ್ಲಾ ಸಂವಹನಗಳಲ್ಲಿ ನಿಮ್ಮ ಇಂಡಸ್ ಇಂಡ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಸಂಖ್ಯೆ ನಮೂದಿಸಿ

## ಪೂರ್ವನಿರ್ಧಾರಿತ

- ಪೂರ್ವನಿರ್ಧಾರಿತವಾದಲ್ಲಿ, ಕಾರ್ಡ್ ಹೋಲ್ಡರ್‌ನ ಕ್ರೆಡಿಟ್ ಕಾರ್ಡ್ ಖಾತೆಯ ಮೇಲೆ ಯಾವುದೇ ಹೆಚ್ಚುವರಿ ಬಾಕಿ ವಸೂಲಾತಿಗಾಗಿ ಇಂಡಸ್ ಇಂಡ್ ಬ್ಯಾಂಕ್, ಅಂಚೆ, ಫ್ಯಾಕ್ಸ್, ದೂರವಾಣಿ, ಎಲೆಕ್ಟ್ರಾನಿಕ್ ಮೇಲ್, ಎಸ್ ಎಂ ಎಸ್ ಸಂದೇಶ ಮತ್ತು/ಅಥವಾ ಇಂಡಸ್ ಇಂಡ್ ಬ್ಯಾಂಕ್ ನೇಮಿಸಲ್ಪಟ್ಟ ಮೂರನೆಯ ವ್ಯಕ್ತಿಗಳ ಪ್ರತಿನಿಧಿಗಳ ಮೂಲಕ ನೆನಪಿಸಲು, ಅನುಸರಣೆ ಮಾಡಲು ಮತ್ತು ಬಾಕಿ ಸಂಗ್ರಹಿಸಲು ಸೂಕ್ತ ಸಮಯದಲ್ಲಿ ಜ್ಞಾಪನ ಕಳುಹಿಸಬಹುದಾಗಿದೆ. ಹೀಗೆ ನೇಮಿಸಲಾದ ಯಾವುದೇ ಮೂರನೆಯ ವ್ಯಕ್ತಿ ಕಾಲಕಾಲಕ್ಕೆ ಅನ್ವಯವಾಗುವ ಸಾಲ ಸಂಗ್ರಹ ನೀತಿಸಂಹಿತೆಗೆ ಬದ್ಧವಾಗಿರಬೇಕಾಗುತ್ತದೆ.

ಕಾರ್ಡ್ ಹೋಲ್ಡರ್ ಪೂರ್ವನಿರ್ಧಾರಿತವಾಗಿ ತಪ್ಪು ಮಾಡಿದ ಸಂದರ್ಭದಲ್ಲಿ, ಬ್ಯಾಂಕ್ ತನ್ನ ಏಕಮಾತ್ರ ನಿರ್ಧಾರದ ಮೇರೆಗೆ ಈ ಕೆಳಗಿನ ಹಕ್ಕುಗಳನ್ನು ಹೊಂದಿರುತ್ತದೆ:

- ಕಾರ್ಡ್ ಹೋಲ್ಡರ್‌ನ ಎಲ್ಲಾ ಕ್ರೆಡಿಟ್ ಕಾರ್ಡ್ ಸೌಲಭ್ಯ ವಿಸ್ತರಣೆಯನ್ನು ತಡೆಹಿಡಿಯಬಹುದು.
- ಕಾರ್ಡ್ ಹೋಲ್ಡರ್‌ಗೆ ಕಾರ್ಡ್ ಮೇಲಿನ ಎಲ್ಲಾ ಹೆಚ್ಚುವರಿ ಬಾಕಿ ಪಾವತಿಸುವಂತೆ ಕೇಳಬಹುದು.
- ಬ್ಯಾಂಕ್ ನಲ್ಲಿ ಕಾರ್ಡ್ ಹೋಲ್ಡರ್ ಹೆಸರಿನಲ್ಲಿ ಇಡಲಾದ ಯಾವುದೇ ಹಣ/ಠೇವಣಿ/ಖಾತೆಗಳ ಮೇಲೆ ಹೆಚ್ಚುವರಿ ಬಾಕಿ ಹೊಂದಿಸುವ ಮತ್ತು ವಸೂಲಾತಿ ಮಾಡುವ ಬ್ಯಾಂಕ್ ಹಕ್ಕನ್ನು ಚಲಾಯಿಸುವುದು
- ಬ್ಯಾಂಕ್‌ಗೆ ಸೂಕ್ತವೆಂದು ತೋರುವ ಯಾವುದೇ ಕಾನೂನುಬದ್ಧ ರೀತಿಯಲ್ಲಿ ಎಲ್ಲಾ ಬಾಕಿಯನ್ನು ವಸೂಲು ಮಾಡುವ ಯಾವುದೇ ಹಕ್ಕನ್ನು ಸ್ವತಂತ್ರವಾಗಿ ಚಲಾಯಿಸುವುದು
- ಕಾರ್ಡ್ ಹೋಲ್ಡರ್‌ಗೆ ಯಾವುದೇ ಪೂರ್ವಸೂಚನೆ ನೀಡದೇ ಮತ್ತು ಗೌಪ್ಯತೆಯ ಅಡಿಯಲ್ಲಿ, ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಅಥವಾ ಯಾವುದೇ



ಪ್ರಾಧಿಕಾರ, ಕ್ರೆಡಿಟ್ ಸಂಸ್ಥೆ ಅಥವಾ ಯಾವುದೇ ಸರ್ಕಾರಿ ಪ್ರಾಧಿಕಾರ ಅಥವಾ ಕಾರ್ಡ್ ಹೋಲ್ಡರ್‌ನ ಗುರುತಿರುವ ಇತರ ಸಂಸ್ಥೆ/ವ್ಯಕ್ತಿಗೆ ತಿಳಿಸುವುದು ಹಾಗೂ ಕಾರ್ಡ್ ದಾರ ದೋಷಿಯಾದ ಬಗ್ಗೆ ಮಾಹಿತಿ ನೀಡಬಹುದಾಗಿದೆ.

ಬ್ಯಾಂಕ್ ಈ ಕೆಳಗಿನ ಸಂದರ್ಭದಲ್ಲಿ ಯಾವುದೇ ಪೂರ್ವನಿರ್ಧಾರಿತವಾಗಿ ನೀಡಲಾದ ವರದಿಯನ್ನು ಹಿಂಪಡೆಯುವ ಹಕ್ಕನ್ನು ಹೊಂದಿದೆ:

- ದೋಷಿಯೆಂದು ಬಿಂಬಿತವಾದ ವ್ಯಕ್ತಿ ಬ್ಯಾಂಕ್ ಗೆ ಇಡೀ ಬಾಕಿಯನ್ನು ನೀಡಬೇಕಾಗುತ್ತದೆ ಅಥವಾ ಬ್ಯಾಂಕ್ ನೊಂದಿಗೆ ಬಾಕಿ ಇರುವ ಹಣ ನೀಡಿದರೆ.
- ಬ್ಯಾಂಕ್ ವಿರುದ್ಧ ಅಥವಾ ಕಾನೂನಿನಲ್ಲಿ ಬ್ಯಾಂಕ್ ವಿರುದ್ಧದ ಎಲ್ಲಾ ಪ್ರಕರಣಗಳ ವಿರುದ್ಧ ಕಾರ್ಡ್ ಹೋಲ್ಡರ್‌ನನ್ನು ಪಟ್ಟಿಯಿಂದ ತೆಗೆದುಹಾಕಿದ ಬಗ್ಗೆ ನ್ಯಾಯಾಲಯ ತೀರ್ಪು ನೀಡಿದರೆ. ನಿರ್ಧಾರವನ್ನು ವೈಯಕ್ತಿಕ ಅಭಿಪ್ರಾಯದ ಆಧಾರದಲ್ಲಿ ಪ್ರಕರಣದಿಂದ ಪ್ರಕರಣಕ್ಕೆ ಭಿನ್ನವಾಗಿ ತೆಗೆದುಕೊಳ್ಳಲಾಗುತ್ತದೆ.
- ಕಾರ್ಡ್ ಹೋಲ್ಡರ್ ಮರಣ ಹೊಂದಿದಲ್ಲಿ ಅಥವಾ ಶಾಶ್ವತ ನ್ಯೂನತೆಗೆ ಒಳಗಾದಲ್ಲಿ, ಇಂಡಸ್ ಇಂಡ್ ಬ್ಯಾಂಕ್ ಕಾನೂನಿನ ಅಡಿಯಲ್ಲಿ ಲಭ್ಯವಿರುವ ಎಲ್ಲಾ ಪ್ರಕರಣಗಳನ್ನೂ ಮುಂದುವರೆಸುವ ಹಕ್ಕನ್ನು ಕಾಯ್ದಿರಿಸಿದ್ದು, ತನ್ನದೇ ನಿರ್ಧಾರದಲ್ಲಿ, ಯಾವುದೇ ಅನ್ವಯವಾಗುವ ವಿಮಾ ರಕ್ಷೆ ಅಥವಾ ಕಾರ್ಡ್ ಹೋಲ್ಡರ್‌ನ ಉತ್ತರಾಧಿಕಾರಿ/ನಿರ್ವಾಹಕರು/ಆಡಳಿತಾತ್ಮಕ ವ್ಯಕ್ತಿಯಿಂದ ಅನ್ವಯವಾಗುವ ಹೆಚ್ಚುವರಿ ಮೊತ್ತವನ್ನು ವಸೂಲಾತಿ ಮಾಡುವುದೂ ಸೇರಿದಂತೆ, ಯಾವುದೇ ಕಾರ್ಡ್ ಖಾತೆ(ಗಳು)ಗೆ ವಸೂಲಾತಿ ಮಾಡುವ ಹಕ್ಕನ್ನು ಕಾಯ್ದಿರಿಸಿದೆ.

## ಕಾರ್ಡ್ ಹೋಲ್ಡರ್ ದಾರ ಅಂತ್ಯಗೊಳಿಸುವುದು/ಹಿಂತೆಗೆದುಕೊಳ್ಳುವುದು

- ಕಾರ್ಡ್ ಹೋಲ್ಡರ್ ಎಲ್ಲಾ ಸೌಲಭ್ಯಗಳನ್ನು ಅಂತ್ಯಗೊಳಿಸಲು ಮನವಿ ಮಾಡಲು ಇಂಡಸ್ ಇಂಡ್ ಬ್ಯಾಂಕ್ ಫೋನ್ ಬ್ಯಾಂಕಿಂಗ್ ಗೆ ಕರೆಮಾಡುವ ಮೂಲಕ ಅಥವಾ ಲಿಖಿತ ಮನವಿಯ ಮೂಲಕ ಯಾವುದೇ ಸಮಯದಲ್ಲಿ ಈ ಒಪ್ಪಂದವನ್ನು ಮತ್ತು ಕ್ರೆಡಿಟ್ ಕಾರ್ಡ್‌ಗೆ ಸಂಬಂಧಿಸಿದ ಸೌಲಭ್ಯಗಳನ್ನು ಅಂತ್ಯಗೊಳಿಸಬಹುದು
- ಬ್ಯಾಂಕ್ ಕ್ರೆಡಿಟ್ ಕಾರ್ಡ್ ಖಾತೆಗೆ ಸಂಬಂಧಿಸಿದ ಎಲ್ಲಾ ಹೆಚ್ಚುವರಿ ಬಾಕಿ ಮೊತ್ತದ ಪಾವತಿಯನ್ನು ಸ್ವೀಕರಿಸಿದ ನಂತರವಷ್ಟೇ ಅಂತ್ಯಗೊಳಿಸುವಿಕೆ ಜಾರಿಯಾಗುತ್ತದೆ.
- ಬ್ಯಾಂಕ್ ಯಾವುದೇ ಸಮಯದಲ್ಲಿ, ತನ್ನದೇ ನಿರ್ಧಾರದಲ್ಲಿ, ಅಥವಾ ಅದರ ಬಳಕೆಯ ನಿರ್ಬಂಧದ ಯಾವುದೇ ಸಮಯದಲ್ಲಿ, ಇದಕ್ಕೆ ಸಂಬಂಧಿಸಿದಂತೆ ಯಾವುದೇ ಸೂಚನೆ ನೀಡದೇ ಕ್ರೆಡಿಟ್ ಕಾರ್ಡ್ ಸೌಲಭ್ಯವನ್ನು ತಕ್ಷಣವೇ ಅಂತ್ಯಗೊಳಿಸಬಹುದು. ಬ್ಯಾಂಕ್ ಕ್ರೆಡಿಟ್ ಕಾರ್ಡ್ ಸೌಲಭ್ಯ ಅಂತ್ಯಗೊಳಿಸಿದಾಗ, ಕಾರ್ಡ್ ಖಾತೆಯಲ್ಲಿನ ಎಲ್ಲಾ ಬಾಕಿ ಮೊತ್ತವನ್ನು (ಹಿಡಿದಿಲ್ಲದ ಶುಲ್ಕಗಳು ಅಥವಾ ಮುಂಗಡ ನಗದು ಸೇರಿದಂತೆ) ಬಾಕಿ ಎಂದು ಪರಿಗಣಿಸಿ, ಕೂಡಲೇ ಪಾವತಿಸಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ, ಬ್ಯಾಂಕ್ ನ ದಾಖಲೆಗಳಿಗೆ ಅನುಗುಣವಾಗಿ ಕ್ರೆಡಿಟ್ ಕಾರ್ಡ್/ಪಿನ್ ಬಳಕೆಯ ಮೂಲಕ ಎಲ್ಲಾ ವಿತ್ ಡ್ರಾಗಳು/ವರ್ಗಾವಣೆಗಳಿಗೆ ಕಾರ್ಡ್ ಖಾತೆಗಳನ್ನು ಹಿಡಿಯಲು ಕಾರ್ಡ್ ಹೋಲ್ಡರ್ ಅಧಿಕಾರವನ್ನು ವ್ಯಕ್ತಪಡಿಸಬಹುದಾಗಿದ್ದು, ಇದನ್ನು ಅಂತಿಮವೆಂದು ಪರಿಗಣಿಸಲಾಗುತ್ತದೆ ಮತ್ತು ಇದಕ್ಕೆ ಬದ್ಧರಾಗಿರಬೇಕಾಗುತ್ತದೆ.
- ಕಾರ್ಡ್ ಹೋಲ್ಡರ್(ಗಳು) ಕ್ರೆಡಿಟ್ ಕಾರ್ಡ್ ಅನ್ನು ಎಂದಿಗೂ ಬಳಸದಿದ್ದರೆ ಅಥವಾ 90 ದಿನಗಳಿಗಿಂತ ಹೆಚ್ಚಿನ ಸಮಯ ಬಳಸದಿದ್ದರೆ, ಈ ಮೂಲಕ ಎಲ್ಲಾ ಸೌಲಭ್ಯಗಳನ್ನೂ ಹಿಂಪಡೆಯಬಹುದಾಗಿದೆ. ಇಂತಹ ಕಾರ್ಡ್ ಹೋಲ್ಡರ್(ಗಳು) ಗೆ ವಿತ್ ಡ್ರಾ ದ ಪೂರ್ವಸೂಚನೆ ನೀಡಲಾಗುತ್ತದೆ

## ಕಾರ್ಡ್ ನಷ್ಟ/ಕಳುವಾಗುವುದು

- ಕಾರ್ಡ್ ಹೋಲ್ಡರ್ ಕಾರ್ಡ್‌ನ ಭದ್ರತೆಗೆ ಜವಾಬ್ದಾರನಾಗಿದ್ದು, ಇದನ್ನು ಸುರಕ್ಷಿತವಾಗಿಡಲು ಎಲ್ಲಾ ಕ್ರಮಗಳನ್ನೂ ತೆಗೆದುಕೊಳ್ಳುತ್ತದೆ.
- ಕಾರ್ಡ್ ಹೋಲ್ಡರ್ ಇಂಡಸ್ ಮೊಬೈಲ್/ಇಂಡಸ್ ನೆಟ್/ಐವಿಆರ್ ಮೂಲಕ, 24 ಗಂಟೆಗಳ ಫೋನ್ ಬ್ಯಾಂಕಿಂಗ್ ಗೆ ಕರೆಮಾಡುವ ಮೂಲಕ ಅಥವಾ ಬ್ಲಾಕ್ ಕ್ರೆಡಿಟ್ ಕಾರ್ಡ್ ಸಂಖ್ಯೆಯ ಕೊನೆಯ 4 ಅಂಕಿ ಎಂದು ನೋಂದಾಯಿತ ಮೊಬೈಲ್ ಸಂಖ್ಯೆಯಿಂದ 5676757 ಸಂಖ್ಯೆಗೆ ಎಸ್ ಎಂ ಎಸ್ ಸಂದೇಶ ಕಳುಹಿಸುವ ಮೂಲಕ ಬ್ಯಾಂಕ್ ಗೆ ಕಾರ್ಡ್ ನಷ್ಟವಾದ ಬಗ್ಗೆ ವರದಿ ಮಾಡಬೇಕು. ದುರ್ಬಳಕೆಯನ್ನು ತಡೆಯಲು ಬ್ಯಾಂಕ್ ಕೂಡಲೇ ಕಾರ್ಡ್ ಅನ್ನು ನಿಷ್ಕ್ರಿಯಗೊಳಿಸುತ್ತದೆ. ಸ್ಥಳೀಯ ಪೋಲೀಸರೊಂದಿಗೆ ಕಾರ್ಡ್ ಹೋಲ್ಡರ್ ಮೊದಲ ಮಾಹಿತಿ ವರದಿ ('ಎಫ್ ಐ ಆರ್') ಮಾಡಬೇಕು. ಕಾರ್ಡ್ ಹೋಲ್ಡರ್ ಬ್ಯಾಂಕ್ ಗೆ ಲಿಖಿತ ಖಚಿತತೆ ಕಳುಹಿಸಬೇಕು. ನಂತರ ಕಾರ್ಡ್ ಹೋಲ್ಡರ್ ಬ್ಯಾಂಕ್ ಗೆ ಕೆಳಗಿನ ದಾಖಲಾತಿಗಳನ್ನು ಕಳುಹಿಸಬೇಕು:
  - ಅಧಿಕಾರಿಯಿಂದ ಸೂಕ್ತವಾಗಿ ಸ್ವೀಕರಿಸಲ್ಪಟ್ಟ ಎಫ್ ಐ ಆರ್ ವರದಿ
  - ವಹಿವಾಟು ನಷ್ಟ/ಸಂಘರ್ಷದ ಬಗ್ಗೆ ವಿವರಗಳನ್ನು ಹೊಂದಿರುವ ಪತ್ರ
  - ಕಾರ್ಡ್ ಹೋಲ್ಡರ್‌ರಿಂದ ನಷ್ಟಪರಿಹಾರ ಪತ್ರ
  - ಅಂತಾರಾಷ್ಟ್ರೀಯ ಸಂಘರ್ಷವಾದಲ್ಲಿ, ಪಾಸ್‌ಪೋರ್ಟ್ ಪ್ರತಿಗಳು
  - ಬ್ಯಾಂಕ್ ಗೆ ಅಗತ್ಯವಿರುವ ಮತ್ತು ಬ್ಯಾಂಕ್‌ಗೆ ತೃಪ್ತಿಯಾಗುವಂತೆ ಇತರ ಎಲ್ಲಾ ದಾಖಲಾತಿಗಳು
  - ಬ್ಯಾಂಕ್ ತನ್ನದೇ ವೆಚ್ಚದಲ್ಲಿ, ಭೌಗೋಳಿಕ ಮಿತಿಯೊಳಗೆ ಕಳುವಾದ/ನಷ್ಟವಾದ ವಿಮಾ ಪಾಲಿಸಿ ನೀಡಬೇಕಾಗುತ್ತದೆ ಮತ್ತು ಇದು ಪಾಲಿಸಿಯಲ್ಲಿ ವಿಶೇಷವಾಗಿ ನೀಡಲಾದ ನಿಯಮ ಮತ್ತು ಷರತ್ತುಗಳಿಗೆ ಅನುಗುಣವಾದ ಮಿತಿಗೆ ಒಳಪಟ್ಟಿದೆ.

## ಇತರ

- ನಾನು/ನಾವು, ಇಲ್ಲಿ ನೀಡಲಾಗಿರುವ ಮಾಹಿತಿ ಸರಿಯಾಗಿದೆ ಎಂದು ಖಚಿತಪಡಿಸುತ್ತಿದ್ದೇನೆ/ವೆ. ಕಾರ್ಡ್ ಹೋಲ್ಡರ್ (ಗಳು) ಆದ ನಾನು/ನಾವು, ಈ ಮೂಲಕ ಬ್ಯಾಂಕ್ ಗೆ ಕ್ರೆಡಿಟ್ ಪರಿಶೀಲನೆ ಅಥವಾ ಪರಾಮರ್ಶನೆ ಪರೀಕ್ಷೆಗಳು, ಅದರ ಹಿತಾಸಕ್ತಿಗಳ ರಕ್ಷಣೆ ಇತ್ಯಾದಿಗಳ ಉದ್ದೇಶಕ್ಕೆ ಅಧಿಕಾರ ನೀಡಿದ್ದು, ಈ ಮೂಲಕ ಕಾರ್ಡ್ ಹೋಲ್ಡರ್ /ಈ ಒಪ್ಪಂದಕ್ಕೆ ಸಂಬಂಧಿಸಿದ ಎಲ್ಲಾ/ಯಾವುದೇ ಮಾಹಿತಿ ಬಹಿರಂಗಪಡಿಸಲು ಮತ್ತು/ಅಥವಾ ಕಾರ್ಡ್ ಹೋಲ್ಡರ್‌ನ ಇತರ ಯಾವುದೇ ಒಪ್ಪಂದ ಅಥವಾ ಪೂರ್ವನಿರ್ಧಾರಿತವನ್ನು ಬಹಿರಂಗಪಡಿಸಲು, ಭಾರತೀಯ ರಿಸರ್ವ್ ಬ್ಯಾಂಕ್, ತೆರಿಗೆ ಪ್ರಾಧಿಕಾರಗಳು, ಕಾನೂನು ಜಾರಿ ನಿರ್ದೇಶನಾಲಯ, ನ್ಯಾಯಮಂಡಳಿ, ನ್ಯಾಯವ್ಯಾಪ್ತಿ, ನ್ಯಾಯಾಲಯ, ಕಾನೂನು ಸಮಿತಿಗಳು, ಇತರ ಬ್ಯಾಂಕ್‌ಗಳು, ಕ್ರೆಡಿಟ್ ಸಂಸ್ಥೆ, ಹಣಕಾಸು ಸಂಸ್ಥೆಗಳು ಅಥವಾ ಇತರ ಯಾವುದೇ ಮೂರನೆಯ ವ್ಯಕ್ತಿಗಳಿಗೆ , ಯಾವುದೇ ಸಮಯದಲ್ಲಿ ಬಹಿರಂಗಪಡಿಸಲು ಅಧಿಕಾರ ನೀಡುತ್ತಿದ್ದೇನೆ/ವೆ/. ನಾನು/ನಾವು ಒಪ್ಪಂದ ಗೌಪ್ಯತೆ ಮತ್ತು ಖಾಸಗಿತನದ ಸೌಲಭ್ಯದಿಂದ ವಿನಾಯಿತಿ ನೀಡುತ್ತಿದ್ದೇನೆ/ವೆ.
- ಈ ಮೂಲಕ ಕಾರ್ಡ್ ಹೋಲ್ಡರ್, ಅರ್ಜಿಯಲ್ಲಿ ಕಾರ್ಡ್ ಹೋಲ್ಡರ್ ಮಾಹಿತಿ ಭರ್ತಿ ಮಾಡಲು ಒಪ್ಪಿಗೆ ನೀಡಬೇಕು, ಇಲ್ಲದಿದ್ದಲ್ಲಿ, ಬ್ಯಾಲೆನ್ಸ್ ವರ್ಗಾವಣೆಗೆ



ಸೀಮಿತವಿಲ್ಲದಿರುವುದೂ ಸೇರಿದಂತೆ, ಇಎಂಐ ಕೊಡುಗೆಗಳು, ನಗದು ಸಂಬಂಧಿತ ಕೊಡುಗೆಗಳು, ವಿಮಾ ಉತ್ಪನಗಳು ಇತ್ಯಾದಿಗಳ ಬಗ್ಗೆ ಕಾಲಕಾಲಕ್ಕೆ ನೀಡಲು, ಕಾರ್ಡ್ ಸಂಬಂಧಿತ ಕೊಡುಗೆಗಳನ್ನು ಮಾರಾಟ ಮಾಡಲು ಮಾರ್ಕೆಟಿಂಗ್ ಉದ್ದೇಶಗಳಿಗೆ ಬ್ಯಾಂಕ್ ಬಳಸಲು ಒಪ್ಪಿಗೆ ನೀಡಬೇಕು. ಹಾಗೂ ಬ್ಯಾಂಕ್ ಈ ಮಾಹಿತಿಯನ್ನು ಅನ್ವಯವಾಗುವಂತೆ ಬಹಿರಂಗಪಡಿಸಲು, ಕಾಲಕಾಲಕ್ಕೆ ಬ್ಯಾಂಕ್ ನ ಇತರ ಉತ್ಪನ್ನಗಳನ್ನು ಮಾರುಕಟ್ಟೆ ಮಾಡಲು ಮಾಹಿತಿ ನೀಡಲು ಬಳಸಬಹುದಾಗಿದೆ.

- ಬ್ಯಾಂಕ್‌ಗೆ ಸೂಕ್ತವೆನಿಸುವ ಟೆಲಿಮಾರ್ಕೆಟಿಂಗ್ ಮಾಧ್ಯಮಗಳು/ಕರೆಗಳು ಅಥವಾ ನೇರ ಮೇಲ್ ಅಥವಾ ಇತರ ಯಾವುದೇ ಸಂವಹನ ಮಾಧ್ಯಮದ ಮೂಲಕ ತನ್ನ ಉತ್ಪನ್ನಗಳನ್ನು ಮಾರ್ಕೆಟಿಂಗ್ ಮಾಡಲು ಕಾರ್ಡ್ ಹೋಲ್ಡರ್ ಗೆ ಈ ಮಾಹಿತಿ ನೀಡಲು ಬಳಸಬಹುದಾಗಿದೆ. ಕಾರ್ಡ್ ಹೋಲ್ಡರ್ (ಗಳು) ಗೆ ಅನಾನುಕೂಲವಾಗಿಲ್ಲವೆಂದು ಖಚಿತಪಡಿಸಲು, ಬ್ಯಾಂಕ್ 'ಡು–ನಾಕಟ್–ಕಾಲ್' ನೋಂದಣಿ ಹೊಂದಿರಬೇಕು ಮತ್ತು ಕಾರ್ಡ್ ಹೋಲ್ಡರ್ (ಗಳು), ತಮಗೆ ಯಾವುದೇ ಮಾರ್ಕೆಟಿಂಗ್ ಕೊಡುಗೆಗಳಿಗಾಗಿ ಕರೆ ಮಾಡಲು ಬಯಸದಿದ್ದರೆ, ಅವರು ಬ್ಯಾಂಕ್‌ಗೆ ಡು–ನಾಟ್–ಕಾಲ್' ನೋಂದಣಿಯಲ್ಲಿ ಸಂಪರ್ಕ ಸಂಖ್ಯೆಗಳನ್ನು ಪಟ್ಟಿ ಮಾಡಲು ಬ್ಯಾಂಕ್ ಗೆ ತಿಳಿಸಬೇಕು
- ಕಾರ್ಡ್ ಹೋಲ್ಡರ್, ಉದ್ದಿಮೆ ಅಭ್ಯಾಸಗಳು ಮತ್ತು ಅನ್ವಯವಾಗುವ ಸೌಲಭ್ಯಗಳಿಗೆ ಅನುಗುಣವಾಗಿ, ಯಾವುದೇ ಪ್ರಸ್ತುತ ಅಥವಾ ಭವಿಷ್ಯದ ಕ್ರೆಡಿಟ್ ಸಂಸ್ಥೆಗಳೊಂದಿಗೆ ಬ್ಯಾಂಕ್' ಸೂಕ್ತವೆನಿಸುವಂತೆ ಕಾಲಕಾಲಕ್ಕೆ ಕಾರ್ಡ್ ಹೋಲ್ಡರ್ ಮಾಹಿತಿ ವಿನಿಮಯ ಮಾಡಲು ಅಧಿಕಾರ ನೀಡಿರುವುದಾಗಿ ಒಪ್ಪಿಗೆ ನೀಡಬೇಕು. ಕಾರ್ಡ್ ಹೋಲ್ಡರ್ ಬ್ಯಾಂಕ್ ಇಂತಹ ಮಾಹಿತಿಯನ್ನು ಕಾರ್ಡ್ ಹೋಲ್ಡರ್‌ಗೆ ಯಾವುದೇ ಪೂರ್ವ ಸೂಚನೆ ನೀಡದೇ ವಿನಿಮಯ ಮಾಡಲು ಮತ್ತು ಇಂತಹ ಮಾಹಿತಿ ಕಾರ್ಡ್ ಹೋಲ್ಡರ್ ಮೆಲೆ ಸಕಾರಾತ್ಮಕ ಅಥವಾ ನಕಾರಾತ್ಮಕ ಸಾಧನೆ/ಪೂರ್ವನಿರ್ಮಿತಕ್ಕೆ ಒಳಪಟ್ಟಿರುತ್ತದೆಂದು ಅರ್ಥಮಾಡಿಕೊಂಡಿರುವುದಾಗಿ ಒಪ್ಪಿಗೆ ನೀಡಬೇಕು.
- ಭಾರತೀಯ ಕಾರ್ಡ್ ಮಾಹಿತಿ ಸಂಸ್ಥೆ (ಸಿಬಿಲ್) ಎನ್ನುವುದು ಭಾರತ ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನ ಅಭಿಯಾನವಾಗಿದ್ದು, ಇದು ಭಾರತೀಯ ಹಣಕಾಸು ವ್ಯವಸ್ಥೆಯ ಕಾರ್ಯವಿಧಾನ ಮತ್ತು ಸ್ಥಿರತೆಯನ್ನು ಸುಧಾರಿಸುತ್ತದೆ. ಇದು ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳ ನಡುವಿನ ಮಾಹಿತಿ ವಿನಿಮಯಕ್ಕೆ ಪರಿಣಾಮಕಾರಿ ತಂತ್ರವನ್ನು ನೀಡುವ ಮೂಲಕ, ಕಾರ್ಡ್ ಹೋಲ್ಡರ್ ವಿವಿಧ ಸಂಸ್ಥೆಗಳಿಂದ ಉತ್ತಮ ಸಾಲಸೌಲಭ್ಯ ಪಡೆಯಲು ನೆರವಾಗುತ್ತದೆ.
- ಈ ಅಭಿಯಾನದಲ್ಲಿನ ಎಲ್ಲಾ ಬ್ಯಾಂಕ್ ಗಳು ಮತ್ತು ಹಣಕಾಸು ಸಂಸ್ಥೆಗಳು ಕಾರ್ಡ್ ಹೋಲ್ಡರ್ ಮಾಹಿತಿಯನ್ನು ಸಿಬಿಲ್ ನೊಂದಿಗೆ ಹಂಚಿಕೊಳ್ಳುವ ಅಗತ್ಯವಿದೆ. ಮೇಲಿನ ಅಭಿಪ್ರಾಯದೊಂದಿಗೆ, ಬ್ಯಾಂಕ್ ಕಾರ್ಡ್ ಹೋಲ್ಡರ್‌ಗೆ ಇಂಡಸ್ ಇಂಡ್ ಬ್ಯಾಂಕ್ ಕಾರ್ಡ್ ಹೋಲ್ಡರ್‌ನ ಖಾತೆಯನ್ನು ಸಿಬಿಲ್‌ನೊಂದಿಗೆ ಮಾಹಿತಿ ವಿನಿಮಯ ಮಾಡುವ ಬಗ್ಗೆ ತಿಳಿಸುತ್ತದೆ ಈ ಮಾಹಿತಿಯನ್ನು ಎಲ್ಲಾ ಕಾರ್ಡ್ ಹೋಲ್ಡರ್‌ಗೆ ನಿಯಮಿತವಾಗಿ ತಿಳಿಸಲಾಗುತ್ತದೆ ಮತ್ತು ಈ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಡ್ ಹೋಲ್ಡರ್(ಗಳ) ನಿರಂತರ ಬೆಂಬಲ ಮತ್ತು ಸಹಕಾರಕ್ಕಾಗಿ ಬ್ಯಾಂಕ್ ಅವರಿಗೆ ಧನ್ಯವಾದ ತಿಳಿಸುತ್ತದೆ.